ಹವಿಗನ್ನಡಂ ಗೆಲ್ಗೆ

ಹವಿಗನ್ನಡದ

ನವ ಪ್ರಸಂಗಗಳು

ಸಂಪಾದಕ

ನಾರಾಯಣ ಶಾನಭಾಗ

ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ)
ಬೆಂಗಳೂರು

29/3/08

ಓಂ

ಧಿಯೋ ಯೋ ನಃ ಪ್ರಚೋದಯಾತ್

ಹವಿಗನ್ನಡದ

ನವ ಪ್ರಸಂಗಗಳು

ಸಂಪಾದಕ

ನಾರಾಯಣ ಶಾನಭಾಗ

ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು

ಹವ್ಯಕ ಅಧ್ಯಯನ ಕೇಂದ್ರ ಪ್ರಕಟಣೆ - 10

ಹವಿಗನ್ನಡ ಸಾಹಿತ್ಯ ಮಾಲೆ – 3

ಹವಿಗನ್ನಡ ನವ ಪ್ರಸಂಗಗಳು : ಸಂಪಾದಕ : ನಾರಾಯಣ ಶಾನಭಾಗ, ಪ್ರಧಾನ ನಿರ್ದೇಶಕ, ಹವ್ಯಕ ಅಧ್ಯಯನ ಕೇಂದ್ರ, ಶ್ರೀ ಅಖಿಲ ಹವ್ಯಕ ಮಹಾಸಭಾ, ಬೆಂಗಳೂರು. ದೂರವಾಣಿ : 26592097 (ಮನೆ)

ಮೊಬೈಲ್ : 94496 94666

ಪ್ರ.ಮು.: 2007 ಪುಟ : 112 + viii

ಕೃತಿ ಸಹಾಯ ಧನ : ರೂ. 40/-

ಪ್ರಕಾಶನ : ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು
101/1, 11ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು–560 003
ದೂರವಾಣಿ : 23348193, 4112 8498

ಹಕ್ಕು : ಪ್ರಕಾಶಕರದು

ಡಿ.ಟಿ.ಪಿ. : ವೆಕ್ಟರ್ ಗ್ರಾಫಿಕ್ಸ್
ನಂ. 10, ನಾಗಪ್ಪ ಬ್ಲಾಕ್, ಬೆಂಗಳೂರು–560 021

ಮುದ್ರಕರು : ಸ್ಟ್ಯಾಂಡರ್ಡ್ ಪ್ರಿಂಟರ್ಸ್
ಶಂಕರಪುರಂ, ಬೆಂಗಳೂರು
ಮೊಬೈಲ್ : 98451 91648

ಶ್ರೀ ಅಖಿಲ ಹವ್ಯಕ ಮಹಾಸಭೆ

ಮನುಷ್ಯ ಸಮಾಜ ಜೀವಿ. ಸಂಘಟನೆ ಸಾಮಾಜಿಕ ಬದುಕಿನ ಅನಿವಾರ್ಯತೆ. ''ಸಂಘೇ ಶಕ್ತಿಃ ಕಲೌಯುಗೇ'' ಎಂಬುದನ್ನು ಮನಗಂಡ ಹವ್ಯಕ ಗಣ್ಯರು 1943ರಲ್ಲಿ ಬೆಂಗಳೂರಲ್ಲಿ ಸ್ಥಾಪಿಸಿದ ಹವ್ಯಕ ಸಂಘಟನೆ ಇಂದು ಶ್ರೀ ಅಖಿಲ ಹವ್ಯಕ ಮಹಾಸಭೆಯಾಗಿ ರೂಪುಗೊಂಡಿದೆ. ಮಹಾಸಭೆಯ ಸಾಧನೆ ನಗಣ್ಯವೇನಲ್ಲ. ಆದರೂ ಇತರ ಸಮಾಜದವರು ಸಂಘಟನೆಯ ಮೂಲಕ ಸಾಧಿಸಿದ ಸಾಧನೆ, ಏರಿದ ಎತ್ತರಗಳನ್ನು ಗಮನಿಸಿದಾಗ ನಾವು ಅವರ ಮುಂದೆ ಕುಬ್ಜರಾಗುತ್ತೇವೆ. ಆದ್ದರಿಂದ ನಮ್ಮ ಸಂಘಟನೆಯನ್ನು ಬಲಪಡಿಸಿ ಸಮಗ್ರ ಹವ್ಯಕ ಸಮಾಜದ ಸರ್ವಾಂಗೀಣ ಪ್ರಗತಿಯತ್ತ ಕಾರ್ಯಪ್ರವೃತ್ತರಾಗಬೇಕಾದುದು ಇಂದಿನ ಅವಶ್ಯಕತೆ.

ಮಹಾಸಭೆಯ ಸದಸ್ಯರಿಗೆ ದೊರೆಯುವ ಸೌಕರ್ಯಗಳು

1. ''ಹವ್ಯಕ ಮಹಾಸಭೆ''ಯೆಂಬ ವಿಶ್ವಕುಟುಂಬದ ಹೆಮ್ಮೆಯ ಸದಸ್ಯತ್ವ.
2. ಹವ್ಯಕ ಸಮಾಜದ ಮುಖವಾಣಿಯಾದ 'ಹವ್ಯಕ' ಮಾಸಪತ್ರಿಕೆ ಉಚಿತವಾಗಿ ಮನೆ ಬಾಗಿಲಿಗೆ.
3. ಸಭೆ–ಸಮಾರಂಭಗಳಿಗೆ ರಿಯಾಯಿತಿ ದರದಲ್ಲಿ 'ಹವ್ಯಕ ಸಭಾಭವನ'.
4. ಹವ್ಯಕ ಭವನದ ಅತಿಥಿ ಕೋಣೆಗಳಲ್ಲಿ ಲಭ್ಯತೆಯ ಆಧಾರದ ಮೇಲೆ ಸ್ಥಳಾವಕಾಶ.
5. 'ಹವ್ಯಕ ವಿದ್ಯಾರ್ಥಿ ನಿಲಯ' ಮತ್ತು 'ಹವ್ಯಕ ಮಹಿಳಾ ವಸತಿ ಗೃಹ'ಗಳಲ್ಲಿ ಸದಸ್ಯರ ಮಕ್ಕಳಿಗೆ ಲಭ್ಯತೆಯ ಆಧಾರದ ಮೇಲೆ ಸ್ಥಳಾವಕಾಶ.
6. 40ಕ್ಕೂ ಮಿಕ್ಕ ಸ್ಥಳೀಯ ಹವ್ಯಕ ಸಂಘಗಳ ಸದಸ್ಯರೊಂದಿಗೆ ಸಂಪರ್ಕದ ಅವಕಾಶ.
7. 'ಹವ್ಯಕ' ಪತ್ರಿಕೆಯಲ್ಲಿ ವೈವಾಹಿಕ ಜಾಹಿರಾತು, ಪ್ರತಿಭಾನ್ವಿತರ ಪರಿಚಯ, ಸಾಂಘಿಕ ಕಾರ್ಯಕ್ರಮಗಳ ಪ್ರಚಾರಕ್ಕೆ ಸ್ಥಳಾವಕಾಶ.
8. ಹವ್ಯಕ ವೈವಾಹಿಕ ಮಾಹಿತಿ ಕೇಂದ್ರ ಮತ್ತು ಉದ್ಯೋಗ ಮಾಹಿತಿ ಕೇಂದ್ರಗಳಲ್ಲಿ ನೋಂದಣಿ ಮತ್ತು ಮಾಹಿತಿ ಪರಿಶೀಲನೆಗೆ ಅವಕಾಶ.

9. 'ಪ್ರತಿಬಿಂಬ', 'ಸ್ಪರ್ಧಾಸೌರಭ' ಇತ್ಯಾದಿ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸದಸ್ಯರ ಕುಟುಂಬದವರಿಗೆಲ್ಲಾ ಮುಕ್ತ ಅವಕಾಶ.

10. ವಾರ್ಷಿಕ 'ಪ್ರತಿಭಾ ಪುರಸ್ಕಾರ' ಮತ್ತು 'ಸನ್ಮಾನ' ಸಮಾರಂಭಗಳಲ್ಲಿ ಸದಸ್ಯರ ಕುಟುಂಬದವರಿಗೆ ಪ್ರಾಶಸ್ತ್ಯ.

11. 'ಹವ್ಯಕ ಗ್ರಂಥಾಲಯ'ದಲ್ಲಿ ಪುಸ್ತಕಗಳ ಪರಾಮರ್ಶನಕ್ಕೆ ಅವಕಾಶ.

12. 'ಹವ್ಯಕ ಸಮಾಜ ಅಧ್ಯಯನ ಕೇಂದ್ರ'ದ ಚಟುವಟಿಕೆಗಳಲ್ಲಿ ಮುಕ್ತ ಉವಕಾಶ.

ಬಂಧುಗಳೇ, ''ಪರಸ್ಪರಂ ಭಾವಯಂತಃ ಶ್ರೇಯಃ ಪರಮಮವಾಪ್ಸ್ಯಥ'' ನಮ್ಮ ಒಕ್ಕೊರಲಿನ ಧ್ವನಿಯಾಗಲಿ. ಸ್ನೇಹ–ಸೌಹಾರ್ದ–ಸಹಕಾರ–ಸಂಘಟನೆ–ಸ್ವಾವಲಂಬನೆ– ಸಮೃದ್ಧಿಗಳೆಲ್ಲಕ್ಕೂ ಸಾಕಾರ ರೂಪ ಕೊಡುವಲ್ಲಿ ಸಮಯೋಚಿತ ಸಮನ್ವಯ ಸಾಧಿಸೋಣ. ಮುಖ್ಯವಾಹಿನಿಯಲ್ಲಿ ಸಾಗೋಣ. ''ಓಂ ಸಹನಾವವತು ಸಹನೌ ಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ'' ಎಂಬ ಶಾಂತಿ ಮಂತ್ರದ ಕಾರ್ಯಾನುಷ್ಠಾನ ಮಾಡೋಣ.

ಬನ್ನಿ. ಸಂಘಟನೆಯನ್ನು ಬಲಪಡಿಸೋಣ. ನಾವೆಲ್ಲಾ ಶ್ರೀ ಅಖಿಲ ಹವ್ಯಕ ಮಹಾಸಭೆಯ ಸದಸ್ಯರು ಎಂದು ಗುರುತಿಸಿಕೊಳ್ಳುವುದರಲ್ಲಿ ಹೆಮ್ಮೆ ಪಟ್ಟುಕೊಳ್ಳೋಣ.

ನಾರಾಯಣ ಶಾನಭಾಗ

''He who looks deepest into the past looks farthest into the future''

– ಫ್ರೆಂಚ್ ಗಾದೆ

"Think globally and act locally''

ಸಂಪಾದಕನ ನುಡಿ

ಬಹುಶಃ ಹವ್ಯಕರಿಗೆ ಬಹಳ ಪ್ರೀತಿಯ ಕಲಾಪ್ರಕಾರ ಅಂದ್ರೆ ಯಕ್ಷಗಾನ. ಹವ್ಯಕರೇ ಯಕ್ಷಗಾನಕ್ಕಿಳಿದೋರಲ್ಲಿ ಮೊದಲ್ನೆಯೋರು ಎಂಬ ಅಭಿಪ್ರಾಯವೂ ಇದ್ದು. ಯಕ್ಷಗಾನದ ಮೊದಲ್ನೇ ಪ್ರಸಂಗ 'ಆದಿಪರ್ವ'. ಇದರ ಕವಿ ಹೆಸರು ಇನ್ನೂ ಗೊತ್ತಾಯಿದ್ದಿಲ್ಲೆ. ಆದ್ರೆ ಅಂವ ಉತ್ತರ ಕನ್ನಡ ಜಿಲ್ಲೆ ಹವ್ಯಕ್ನಡ. ಕಾಲಮಾನ ಸುಮಾರು 13–14ನೇ ಶತಮಾನ. ಪ್ರಾರಂಬ್ದಿಂದ ಇಲ್ಲೀವರೆಗೆ ಸುಮಾರು 174 ಹವ್ಯಕರಿಂದ ಸುಮಾರು 1182ದಷ್ಟು ಪ್ರಸಂಗ ರಚ್ನೆಯಾಜು ಹೇಳಿ ಕಂಡ್ಬಂಜು. ಹವ್ಯಕರ ತಾಯ್ನುಡಿ ಹವಿಗನ್ನಡ. ಇದ್ರಲ್ಲೂ ಪ್ರಸಂಗ ರಚ್ನೆ ಆಜು.

ಹವಿಗನ್ನಡ್ದಲ್ಲಿ ಪ್ರಕಟಾದ ಮೊದಲ್ನೇ ಪ್ರಸಂಗ 'ದಕ್ಷಾಧ್ವರ'. ವಿಶ್ವವಿನೋದ ಬನಾರಿಯವರ ಈ ಪ್ರಸಂಗ 1991ರಲ್ಲಿ ಪ್ರಕಟಾಜು. ಲೋಕಾರ್ಪಣೆ ದಿನವೇ ತಾಳಮದ್ದಲೆನೂ ಆಜು. ಇಲ್ಲೀವರೆಗೆ ಹವಿಗನ್ನಡ್ದಲ್ಲಿ 3 ಜನರ 7 ಪ್ರಸಂಗ ಪ್ರಕಟಾಜು. ಡಾ|| ಅಂಬೇಮೂಲೆ ಗೋವಿಂದ ಭಟ್ಟರ ಕಾರ್ತವೀರ್ಯಾರ್ಜುನ, ದ್ರೌಪದೀ ಪ್ರತಾಪ, ಪರಶುರಾಮ ಮಹಾತ್ಮೆ, ಸತ್ಯಾನ್ವೇಷಣೆ ಮತ್ತೆ ಸುಭದ್ರಾ ಕಲ್ಯಾಣ ಈ ಐದೂ ಪ್ರಸಂಗ 2006ರಲ್ಲಿ ಪ್ರಕಟಾದ 'ಯಕ್ಷವಲ್ಲರಿ'ಯಲ್ಲಿ ಸೇರಿದ್ದು. ಡಾ|| ವಿಶ್ವನಾಥ ಹೆಗಡೆಯವರ 'ಗೋವಿಂದನ ರಾಜೀ ಪಂಚ್ಯಾಯ್ತಿ' 2006ರಲ್ಲಿ ಹೊನ್ನಾವರ್ದಲ್ಲಿ ನಡೆದ ಮೊದಲ್ನೇ ಹವಿಗನ್ನಡ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ತಾಳಮದ್ದಲೆ ಆಜು, ಸಮ್ಮೇಲನ ಸ್ಮರಣ ಸಂಚಿಕೆ 'ಹವಿಗನ್ನಡಿ'ಲಿ ಪ್ರಕಟಾಜು. ವಿಶ್ವವಿನೋದ ಬನಾರಿಯವ್ರ ಕೃಷ್ಣಾರ್ಜುನರ ಕಾಳಗ, ಕೃಷ್ಣಸಂಧಾನ ಮತ್ತೆ ದಿವಂಗತ ಸೂರ್ಯನಾರಾಯಣ ಭಟ್ಟರ ತಾಟಕಾಮೋಕ್ಷ ಇನ್ನೂ ಹಸ್ತಪ್ರತಿಯಾಗೇ ಇದ್ದು.

'ದಕ್ಷಯಜ್ಞ' ಹವಿಗನ್ನಡ್ದಲ್ಲಿ ರಚ್ನೆಯಾದ ಮೊದಲ್ನೇ ಪ್ರಸಂಗ ಹೇಳಿ ಅನಿಸ್ತು. 1987ರಲ್ಲೇ ಇದ್ರ ರಂಗಪ್ರಯೋಗ (ಬೈಲಾಟ) ನೂ ಆಜು – ಕಾಸರಗೋಡಿನ ಪೆರಡಾಲ ದೇವಸ್ಥಾನದಲ್ಲಿ ನಡೆದ ಹವ್ಯಕ ಸಾಹಿತ್ಯ ಸಮ್ಮೇಲನದಲ್ಲಿ. 1993ರಲ್ಲಿ ಇದು ಧ್ವನಿ ಸುರಳಿ ಆಜು. 1998ರಲ್ಲಿ ಕಾಸರಗೋಡು ಜಿಲ್ಲಾ ಹವ್ಯಕ ಪರಿಷತ್ತಿನ ವಾರ್ಷಿಕೋತ್ಸವದಲ್ಲಿ ತಾಳಮದ್ದಲೆ ಆಜು. ಆಗ ಖ್ಯಾತ ಕಲಾವಿದ ಶೇಣಿ

ಗೋಪಾಲಕೃಷ್ಣ ಭಟ್ಟರು – ಈಶ್ವರ, ಅಡ್ಕ ಗೋಪಾಲಕೃಷ್ಣ ಭಟ್ಟರು – ದಕ್ಷ, ಪ್ರಸಂಗಕರ್ತ ಪೆರಡಂಜಿ ಗೋಪಾಲಕೃಷ್ಣ ಭಟ್ಟರೇ ದಾಕ್ಷಾಯಿಣಿ ಆಗಿ ಅರ್ಥ ಹೇಳಿದ್ವಡ.

ಸೀತಾರಾಮ ಹೆಗಡೇರ 'ಮರ್ಯಾದೆಯ ಮುಸುಕು' 2002ರಲ್ಲಿ ರಚ್ನೆಯಾಜು. ಅದೇ ವರ್ಷ ಮೊದಲ್ನೇಸಲ ಶಿರಸಿ ತಾಲ್ಲೂಕಿನ ಬಪ್ಪನಕೊಡ್ಲಲ್ಲಿ ತಾಳಮದ್ದಲೆ ಆಜು. ಎರಡ್ನೇಸಲ 2003ರಲ್ಲಿ ಶಿರಸಿ ತಾಲ್ಲೂಕಿನ ಹುತ್ತಗಾರಲ್ಲಿ ತಾಳಮದ್ದಲೆ ಆದಾಗ ಖ್ಯಾತ ಭಾಗೋತ ಹೊಸ್ತೋಟ ಮಂಜುನಾಥ ಭಾಗೋತ್ರ ಭಾಗೋತಿಕೆಲಿ ಕೊಡಗಿಪಾಲು ಶಿವರಾಮ ಹೆಗಡೆ ಮತ್ತೆ ವಿ.ಟಿ. ಹೆಗಡೆ ಶೀಗೇಹಳ್ಳಿಯವರೂ ಅರ್ಥ ಹೇಳಿದ್ವಡ.

ವಿಶ್ವವಿನೋದ ಬನಾರಿಯವ್ರು 'ಮಾಗದ ವಧೆ' ಪ್ರಸಂಗ ಕಾಸರಗೋಡಿನಲ್ಲಿ 2003ರಲ್ಲಿ ತಾಳಮದ್ದಲೆ ಆಜು. ಆಗ ಶೇಣಿಯವ್ರು ಮಾಗದ, ಅಪ್ಪಕರು ಭೀಮ, ಮತ್ತೆ ರಮಾನಂದ ಬನಾರಿಯವ್ರು ಕೃಷ್ಣ ಆಗಿ ಅರ್ಥ ಹೇಳಿದ್ವಡ.

ಇಲ್ಲೀವರೆಗೆ ಧ್ವನಿಸುರುಳಿ, ರಂಗಪ್ರಯೋಗ, ತಾಳಮದ್ದಲೆ ಆದ ಹವಿಗನ್ನಡ ಪ್ರಸಂಗ ಹೀಂಗಿದ್ದು.

ರಂಗಪ್ರಯೋಗ

1.	ದಕ್ಷಯಜ್ಞ	– ಕಾಸರಗೋಡು	1987
2.	ಸತ್ಯಾನ್ವೇಷಣೆ	– ಪಳ್ಳತ್ತಡ್ಕ (ಕಾಸರಗೋಡು) ಮತ್ತೆ ಪುತ್ತೂರು	1993

ತಾಳಮದ್ದಲೆ

1.	ದಕ್ಷಾಧ್ವರ	– ನೀರ್ಚಾಲು (ಕಾಸರಗೋಡು)	1991
2.	ದಕ್ಷಯಜ್ಞ	– ಕಾಸರಗೋಡು	1998
3.	ಮರ್ಯಾದೆಯ ಮುಸುಕು	– ಬಪ್ಪನಕೊಡ್ಲು (ಶಿರಸಿ)	2002
		– ಹುತ್ತಗಾರು (ಶಿರಸಿ)	2003
4.	ಮಾಗದ ವಧೆ	– ಕಾಸರಗೋಡು	2003
5.	ಗೋವಿಂದನ ರಾಜೀ ಪಂಚ್ಯಾಯ್ತಿ	– ಹೊನ್ನಾವರ	2006

ಧ್ವನಿ ಸುರುಳಿ

1. ಸತ್ಯಾನ್ವೇಷಣೆ 1993 ಡಾ|| ಅಂಬೆಮೂಲೆ ಗೋವಿಂದ ಭಟ್ಟ
2. ದಕ್ಷಾಧ್ವರ 1993 ವಿಶ್ವವಿನೋದ ಬನಾರಿ
3. ತಾಟಕಾಮೋಕ್ಷ 1993 ಸೂರ್ಯನಾರಾಯಣ ಭಟ್ಟ
4. ಪರಶುರಾಮ ಮಹಾತ್ಮೆ 1996 ಡಾ|| ಅಂಬೆಮೂಲೆ ಗೋವಿಂದ ಭಟ್ಟ
5. ಸುಭದ್ರಾ ಕಲ್ಯಾಣ 1996 ಡಾ|| ಅಂಬೆಮೂಲೆ ಗೋವಿಂದ ಭಟ್ಟ

ಮೊದಲಿನ ನಾಲ್ಕು ಪ್ರಸಂಗ ಬಳ್ಳಮೂಲೆ ಗೋವಿಂದ ಭಟ್ಟರಿಂದ ಮತ್ತೆ ಐದನೇ ಪ್ರಸಂಗ ಕೃಷ್ಣ ಭಟ್ಟ ಚೇಕೋಡು ಇವರಿಂದ ಧ್ವನಿಸುರುಳಿ ಆಜು. ಈ ಐದೂ ಪ್ರಸಂಗ ಕುಂಬಳೆ – ವಿಟ್ಲ ಸೀಮೆ ಹವಿಗನ್ನಡ್ದಲ್ಲಿದ್ದು.

ಈ ಹವಿಗನ್ನಡ್ದ ಪ್ರಾತಿನಿಧಿಕ ಸಂಕಲನದಲ್ಲಿ ಉತ್ತರ ಕನ್ನಡ, ಸಾಗರ ಪ್ರಾಂತ, ದಕ್ಷಿಣ ಕನ್ನಡ ಮತ್ತೆ ಕಾಸರಕೋಡು ಈ ಎಲ್ಲಾ ಪ್ರದೇಶದ ಹವಿಗನ್ನಡ ಪ್ರಸಂಗ ಸೇರ್ಸಿದ್ದೊ. ಈಗಾಗ್ಲೇ ಬೈಲಾಟ ಮತ್ತೆ ತಾಳಮದ್ದಲೆ ಆದ ದಕ್ಷಯಜ್ಞ, ತಾಳಮದ್ದಲೆ ಆದ ಮಾಗದ ವಧೆ ಮತ್ತೆ ಮರ್ಯಾದೆಯ ಮುಸುಕು ಈ ಮೂರೂ ಪ್ರಸಂಗ ಇದ್ರಲ್ಲಿದ್ದು. ಅದಲ್ದೇ ಈ ಸಂಕಲನಕ್ಕೇ ಹೇಳಿ ಆರು ಜನ ಕವಿಯಕ್ಕೊ ಬರ್ಕೊಟ್ಟ ಆರು ಹೊಸಾ ಪ್ರಸಂಗಾನೂ ಇದ್ರಲ್ಲಿದ್ದು. ಒಟ್ಟಾರೆ ಒಂಬತ್ತು ಪ್ರಸಂಗ ಇದ್ದು.

2006ನೇ ಇಸ್ವಿ ಡಿಸೆಂಬರ 25ನೇ ದಿನ ಮೊದಲ್ನೇ ಹವಿಗನ್ನಡ ಸಾಹಿತ್ಯ ಸಮ್ಮೇಳನ ನಡತ್ತು.ಅದ್ರ ನೆನ್ಪು ಇಟ್ಕಳೋ ಹೇಳಿ ವರ್ಷಕ್ಕೆ ಒಂದಾದ್ರೂ ಪ್ರಾತಿನಿಧಿಕ ಪುಸ್ತಕ ತರೊ ಹೇಳಿದ್ದು. ಹೀಂಗಾಗಿ ಈಗ ಹವಿಗನ್ನಡ ಯಕ್ಷಗಾನ ಪ್ರಸಂಗ ಸಂಕಲನ ತರ್ತಾ ಇದ್ದೊ. ಹವಿಗನ್ನಡ್ದ ಪ್ರಾದೇಶಿಕ ಸೊಗಡ ಸೂಸೋ ಇದ್ರಲ್ಲಿ ಒಂಭತ್ತು ಜನರ ಒಂಭತ್ತು ಪ್ರಸಂಗ ಇದ್ದು. ಆ ಒಂಭತ್ತೂ ಜನ ಕವಿಯಕ್ಕೊಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸ್ತೆ, ಸಹೃದಯಿ ಸಮಾಜ ಬಂಧುಗೊ ಎಲ್ಲಾ ಇದ್ಕೆ ಪ್ರೋತ್ಸಾಹ ನೀಡೋ ಹೇಳಿ ವಿನಂತಿ ಮಾಡ್ತೆ.

ನಾರಾಯಣ ಶಾನಭಾಗ

ಒಳಪುಟಗಳಲ್ಲಿ

★ ಸಂಪಾದಕನ ನುಡಿ iii

★ ಪ್ರಸಂಗಗಳು

1) ಮಹಾಗಣಪ್ತಿ ಜನನ – ಗಜಾನನ ಹೆಗಡೆ ವರ್ಧನ್ 1

2) ದಕ್ಷಯಜ್ಞ – ಪೆರಡಂಜಿ ಗೋಪಾಲಕೃಷ್ಣ ಭಟ್ಟ 9

3) ಮಯೂರ್ನ ಗೆಲ್ವು – ಟಿ.ಎಂ. ಸುಬ್ಬರಾಯ 20

4) ಪಲಾಯನ ಪಂಡಿತ ಉತ್ತರ – ಜಲಝಸಖ ಬೆಳ್ಳಾರೆ 31

5) ಚಕ್ರಗ್ರಹಣ – ಎಂ.ಎ. ಹೆಗಡೆ 43

6) ಮಾಗದ ವಧೆ – ವಿಶ್ವವಿನೋದ ಬನಾರಿ 52

7) ಅಭಯ ಪದ – ವಿ.ಟಿ. ಹೆಗಡೆ ಶೀಗೇಹಳ್ಳಿ 59

8) ಶಾಲಿನಿ ಮದ್ವೆ – ಟಿ.ಎಂ. ಶೇಷಗಿರಿ 65

9) ಮರ್ಯಾದೆಯ ಮುಸುಕು – ಸೀತಾರಾಮ ಹೆಗಡೆ 77

* ಹವಿಗನ್ನಡ ಪ್ರಸಂಗಕರ್ತರ ವಿಳಾಸ 110

* ಅನುಬಂಧ – ಹವ್ಯಕ ಅಧ್ಯಯನ ಕೇಂದ್ರದ ಪ್ರಕಟಣೆಗಳು 111

ಟಿಪ್ಪಣಿ : 1) 3ನೆಯದು ಐತಿಹಾಸಿಕ ಆಧಾರಿತ ಕಾಲ್ಪನಿಕ ಪ್ರಸಂಗ. 8 ಮತ್ತು 9ನೆಯವು ಸಾಮಾಜಿಕ–ಕಾಲ್ಪನಿಕ ಪ್ರಸಂಗಗಳು. ಉಳಿದ ಆರು ಪೌರಾಣಿಕ ವಸ್ತುಆಧಾರಿತ ಪ್ರಸಂಗಗಳು.

2) 'ಮಾಗದ ವಧೆ' ಬನಾರಿಯವರ ನಾಲ್ಕನೇ ಹವಿಗನ್ನಡ ಪ್ರಸಂಗ. ಉಳಿದ ಪ್ರಸಂಗಗಳು ಆಯಾ ಪ್ರಸಂಗಕರ್ತರ ಮೊದಲನೇ ಹವಿಗನ್ನಡ ಪ್ರಸಂಗಗಳು.

ಸೂಚನೆ : ಆ° ಈ ಚಿಹ್ನೆ ಇದ್ದ ಅಕ್ಷರವನ್ನು ಅನುಸ್ವಾರ ಸಹಿತ ಓದುವುದು

ಅಭಯ ಪದ

(ಯಕ್ಷಗಾನ ಸಂಧಾನದ್ದೊಂದು ಪ್ರಸಂಗ)

ರಚನೆ :

ವಿ.ಟಿ. ಹೆಗಡೆ ಶೀಗೇಹಳ್ಳಿ

ಯಕ್ಷಗಾನ ಕಲಾವಿದ, ನಾಟಕಕಾರ, ನಟ, ಸಾಹಿತಿ, ಜ್ಯೋತಿಷಿ, ಸಂಗೀತಜ್ಞ.

ವಿಳಾಸ : ಬಸ್ತಿಗಲ್ಲಿ, ಶಿರಸಿ ಉ.ಕ. –581 401 ✆ : 08384 –228210

ಪಾತ್ರವರ್ಗ

ಕೃಷ್ಣ	ದ್ರೌಪದಿ
ವಿದುರ	ಕುಂತಿ
ಪಾರ್ಸವಿ	

****

ರಾಗ -ತೋಡಿ ತ್ರಿವುಡೆ

ಆರುತಿ ಎತ್ತುವ ಬನ್ನೀರೊ ನೀವೆಲ್ಲ।
ಗೌರಾಂಬೆಯ ಪುತ್ರ ಗಣನಾಥಾಗೇ॥
ಕೈ ಮುಗಿದು ಗಣಪಂಗೆ ಮೈ ಚಾಚಿ ಮೊದಲಿಂಗೆ।
ಸೈ ಎನಿಸಿಕೊಳ್ಳುವಾ ಗುಣನಿಧಿಗೆ ॥೧॥
ತೈಯ ತಾಧಿನ್ನ ತೈಯ। ತೈಯ ತಾಧಿನ್ನ ತೈಯ।
ತುಯ್ಯಲಾಡುವ ಆನೆ ಮುಖದವಂಗೇ॥
ಎಲ್ಲರಲ್ಲಿಯೂ ತುಪ್ಪ ಸಕ್ಕರೆ ಕೆನೆಹಾಲು।
ಮತ್ತೆ ಕಜ್ಜಾಯವ ಮೆಲುವವಂಗೇ ॥೨॥

ಸೊಕ್ಕಿದ ರಕ್ಕಸರ ಕುಕ್ಕಿ ಮೆಟ್ಟುವ ಧೀರ।
ಭಕ್ತಿಯೊಳಿಪ್ಪವರ ರಕ್ಷೀಪಂಗೆ।
ಮೋದಕ ಪ್ರೀಯಂಗೆ ಮಾದಕ ಕಣ್ಣಿವಂಗೆ।
ಶೋಧಕ ಬುದ್ಧಿಯ ಸುರಿವವಂಗೇ ॥೩॥

ಯೋಜನೆ ರಂಜನೆ ಸಾಧಕ ಸಿದ್ಧಂಗೆ।
ಮೋದಕ ಪ್ರಿಯಂಗೆ ಗಜವದನಂಗೆ॥
ಸಕಲ ಜಗದೊಳಗೆಲ್ಲ ಪ್ರಥಮ ಪೂಜೆಗೆ ಸಂದು।
ಭಕುತ ಜನರಿಂಗೆಲ್ಲ ವರಕೊಡುವವಂಗೇ ॥೪॥

ವಾರ್ಧಿಕ

ಸರಸಿಜಾಸನ ಸತಿಗೆ ಸರಸತಿಗೆ ವಂದಿಸುತ। ಮೆರೆಸು ಎಂಗಳ ಮತಿಗೆ ಭರ
ನೀತಿಯನಿತ್ತು। ಖತಿಯ ನೀಡಾಡುತ್ತ ನಿಜಧರ್ಮದಲಿ ನಡೆಯೆ ರಾಗಲಯ
ತಾಳಗಳನೂ॥ ಮತಿಯಲ್ಲಿ ಬಿಂಬಿಸುತ ಸತತ ರಕ್ಷಿಸುವಾಣಿ। ಜತನದಲಿ ನೋಡ
ಸಕಲ ಲೋಕದ ಪ್ರಜರ। ಸ್ತುತಿಸುವೆವು ನಿನ್ನಲ್ಲಿ ಎಡಬಿಡದೆ ಸಲಹೆಮ್ಮ ಜಗದಂಬ
ಶರಣೆಂಬೆವೂ॥೧॥

ರಾಗ ದನ್ಯಾಸಿ ಏಕತಾಳ

ದೇವಬಂಜ। ದೇವರ ದೇವ ಬಂಜ॥
ದನವಕಾದವ಼ ಬಂಜ। ಘನವ ತೋರ್ಸಲು ಬಂಜ।
ಜನಪರೆಲ್ಲರ ಮೀರಿ। ಕೀರ್ತಿಗಳಿಸ್ದವ಼ ಬಂಜ॥
ಎಳೆಯ ರೊಡನಾಟದಿ।ಹಾವ ಭಂಗಿಸಿ ನಿಂಜ।
ಸಣಕು ಕುಬ್ಜೆಗೆ ರೂಪ। ವಿತ್ತವ಼ ಬಂಜ ॥೧॥

ಕುಣಿಕೆ ಪೂತನಿಗೇ। ಮೋಕ್ಷವಿತ್ತವ ಬಂಜ।
ಕ್ಷಣದಲಿ ಗೋವರ್ಧನ। ಗುಡ್ಡೆಯೆತ್ತಿಹ ಬಂಜ।
ವನಿತೆಯರ್ ಹೆಳೆಯಲ್ಲಿ। ಮಣಿಯ ಧರಿಸಿಹ ಬಂಜ।
ಮಣಿಮಯ ರಥದಿ। ಮನ್ಮಥನಪ್ಪ ಬಂಜ ॥೨॥
ಅಣುರೇಣು ತೃಣಕಾಷ್ಟ।ದಲಿ ನೆಲೆ ಹರಿ ಬಂಜ।
ಗುಣನಿಧಿ ಲಕ್ಷ್ಮಿಯ। ಗಂಡನೇ ಬಂಜ॥
ಅಬ್ಬೆಗೆ ಬಾಯೊಳು। ಜಗವ ತೋರಿಸಿ ಬಂಜ
ಮಬ್ಬಿನ ಅಸುರರ। ಕೊಂದವನೇ ಬಂಜ ॥೩॥
ಕಂಸ ಮರ್ಧನ ಬಂಜ। ಹಂಸ ಯೋಗವ ತಂಜ
ಧ್ವಂಸ ಗೈಯುತ ಪಾಪ। ನಾಶನ ಬಂಜ॥
ಅಷ್ಟಮಹಿಷಿಯರ ಪತಿ। ಶ್ರೀಲೋಲ ಹರಿಬಂಜ।
ಪುಷ್ಟಿದಾಯಕ ಮಧು। ಸೂದನ ಬಂಜ ॥೪॥
ಅಕ್ಷಯಾಂಬರ ತಂಜ। ಪಕ್ಷಿವಾಹನ ಬಂಜ।
ಕುಕ್ಷಿಯೊಳೀರೇಳು। ಲೋಕ ಹೊತ್ತವ ಬಂಜ।
ಮುಮುಕ್ಷುಗಳೆಲ್ಲರ। ರಕ್ಷಾ ಕವಚ ಬಂಜ॥
ತ್ರ್ಯಕ್ಷಸಖನೆ ಬಂಜ। ಮೋಕ್ಷವ ತಂಜ ॥೫॥
ದೇವ ಬಂಜ। ದೇವರ ದೇವ ಬಂಜ॥

ಭಾಮಿನಿ

ನರನ ದುಗುಡದ ನುಡಿಗೆ ಧರ್ಮಜ।ಇರದೆ ಕೃಷ್ಣಂಗೆಂದ ಕುರುಕುಲತಿಲಕ ಸಂಧಿಯ
ಮುರಿದನಾದರೆ ಕಳೆದು ಮಾತುಗಳಾ॥
ಕಲಹವನು ನಿಶ್ಚೈಸಿ ಬಾರೆನಲಳುತ ದ್ರುಪದಜೆ ಬಂದು ಮಣಿದಳು।
ಸಲಹೋ ಲಕ್ಷ್ಮೀರಮಣ ಎನ್ನುತ ಬಿದ್ದಲಡಿಯೊಳಗೆ॥೧॥

ರಾಗ ಕಾನಡಾ - ರೂಪಕ ತಾಳ

ಕಾಲಡಿಬಿದ್ದಿಹ ತಂಗಿಯನೆತ್ತುತ್ತ। ಶ್ರೀಲೋಲನೆಂದನಾಕೆಯೊಳು॥
ಏಳು ನೀನ್ಯಾತಕೆ ಅಳುತಿಹೆ ಸುಮ್ಮನೆ।ಕಾಲವ ಮೀರ್ವರ್ಯಾರಿದ್ದ॥೧॥
ಅಣ್ಣಯ್ಯ ಕೇಳೆನ್ನ ಮನದೊಳಗಿರುವದ । ಇನ್ನೂ ನೀ ತಿಳಿಯೆಯಾ ಹೇಳು॥
ಎನ್ನಯ ಮುಡಿಯ ಕಟ್ಟಿಸುವೆನೆಂದೆ ಹೇಳಿಹೆ। ಇನ್ನೂ ಅಜಿಲ್ಲೆ ಆ ಭಾಷೆ ॥೨॥
ತಂಗಿ ನೀನ್ಯಾಕೇ ಅಳುತಿಹೆ ಸುಮ್ಮನೆ । ನಿಂಗಾಗಿ ಆನೀಗ ಪೋಗಿ।
ಭಂಗಿಸಿ ನಿನ್ನವರಿಂದ ಆ ದುಷ್ಟರ ನಿಂಗೆ ಸಂತೋಷವ ಕೊಡತಿ ॥೩॥
ಸುಳ್ಳಲ್ಲ ಖರೆಯಿದು ನಂಬ್ಕ್ಯಳೆ ನಿನ್ನಯ। ಮುಡಿಯ ಕಟ್ಟಿಸಿ ಭಾಷೆ ತೀರಸ್ತಿ॥
ವಸುದೇವ ಅಪ್ಪಯ್ಯ ದೇವಕಿಯಾಣೆ। ಎನಗೆಂದು ಕಣ್ಣೀರನೊರೆಸಿ ಪೇಳಿದನು॥೪॥

ಭಾಮಿನಿಯರ್ಧ

ಭರವಸೆಯ ತಾನಿತ್ತುತಂಗಿಗೆ। ಹರಿದನಾ ಹರಿ ಗಜಪುರಿಗೆ ತಾ।
ತೊರೆದು ಕೌರವನರಮನೆಯ ಬರೆ ಶರಣನೆಡೆಗೆ ॥೧॥

ಮಧುಮಾಧವಿ ಅಷ್ಟತಾಳ

ಬಂದ್ಯೆನೊ ಗೋವಿಂದ ಇಂದೆನ್ನ ಮನೆಗೆ। ಚಂದವಾಯಿತು ಧನ್ಯನಾದೆನೀ ಎಡೆಗೆ। ಇಂದಾದರೆನ್ನ ನೆನಪಾತೇನೋನಿಂಗೆ । ಸಂದಿತು ಭವ ಬಂಧ ನಿನ್ನಯ ಉಡಿಗೊ॥೧॥ ಅಂದವಾಯಿತು ನಂದ ಕಂದನೆ ಸಲಹೊ। ಎಂಗಳಹಂಕಾರ ಕಂದಿಸಿ ಕಳೆಯೊ॥ ನಂದಿತು ಭವಬಂಧ ಇಂದಿಗೆ ತಿಳಿಯೊ। ಮುಂದೀ ಬವಣೆಗಳೆಲ್ಲ ನಿಂದೇ ತಿಳಿಯೋ॥೨॥ ಇಂದು ಬಂಜಲೋ ಬವಣೆ ನಿನ್ನೆಡೆ ಬಿಡದೆ। ಮುಂಜು ಕವದ್ದಲೊ ಕುರು ನಂದನರೊಳಗೆ । ಎಂದಿಗೂ ನಿನ್ನಯ ಪಾದ ಬಿಡತನಿಲ್ಲೆ।ಹೊಂದಿಸೊ ನಂದಿಸೋ ಉಳಿದ್ದೆಲ್ಲಾ ನಿಂದೆ ॥೩॥

ಭಾಮಿನಿ

ಎನ್ನ ಹೊಗಳಿಕೆ ಸಾಕು ಮೆಚ್ಚಿದೆ । ನಿನ್ನ ಭಕ್ತಿಗೆ ದಣಿದು ಬಂದಿಹೆ । ಅನ್ನಪಾನವ ಕೊಡದೆ ಮಾತಿನೊಳಿನ್ನು ಉಪಚರಿಪೆ॥ ಎನ್ನ ತಪ್ಪನು ಕ್ಷಮಿಸು ಬಾಬಾ।ರೆನ್ನುತಲಿ ಕರೆದೊಯ್ದುಮನೆಯೊಳು। ಸನ್ನುತನು ಬಗೆಬಗೆಯೊಳುಪಚರಿಸುತ್ತ ತಾನಿರಲು॥೧॥

ಮಧು ಮಾಧವಿ ತ್ರಿವಿಡೆ

ಸಿರಿವರನ ಕರೆತಂದು ಸುಪ್ಪತ್ತಿಗೆಯನೇರಿಸಿ ಶಿರವ ಮಣಿಯುತ । ಚರಣ ಪೂಜೆಯಗೈದು ಸತಿಯನು ಕರೆವುತೆಂದಾ। ವಿದುರನಂದೂ॥೧॥ ಬಾರೇ ಪಾರ್ಸವಿ ನೋಡೆ ಕೃಷ್ಣನ। ಧೀರ ಜಗದೋದ್ಧಾರನೀತನು। ಸಾರಿ ಬಂದಿಹ ನಮ್ಮ ಪುಣ್ಯದಿ। ಧನ್ಯರಾಪು । ಬಾಳು ನೀನು ॥೨॥ ತಾರೇ ಕ್ಷೀರವ ಸ್ವರ್ಣ ಪಾತ್ರೆಯೊಳ್ । ಮಾರಮಣಗರ್ಪಿತವದೆನ್ನುತ । ನರಹರಿಯ ಕರಕಿಡಲು ಕುಡಿದನು । ಪೂರ್ಣ ಮನದಾನಂದದಿ । ಸೊಗಸನೆನೆದು ॥೩॥ ಗುಟುಕು ಗಂಟಲೊಳಿಯೆ ಕ್ಷಣದಲಿ । ಹಸಿವು ಮಾದುದು ಕಡಲ ಶಯನಗೆ । ವಸುಧೆಗಿಳುಹಿದ ಬಾಯಬಿಂದುವ । ನಸುನಗುತ ಮಧುಸೂದನ । ಬೆಡಗಿನಿಂದಾ॥೪॥

ರಾಗ ಮೋಹನ- ಅಷ್ಟತಾಳ

ಪುರವೆಲ್ಲಾ ತುಂಬಿತು ಹಾಲಿನಿಂದಾ । ಮತ್ತೆ ಪ್ರಜರೆಲ್ಲಾ ಬೆರಗಾಗೆ, ನಲವಿನಿಂದಾ॥೧॥ ನೆಲುವಿನ ಹಾಲೆಲ್ಲ ತುಂಬ್ಯೇ ಇದ್ದು। ಇತ್ತ ನೆಲಕಿದ್ದ ಕೊಡವೆಲ್ಲಾ ಉಕ್ಕಿ ಬಂದು॥೨॥ ದಿಕ್ಕು ದಿಕ್ಕುಗಳಲ್ಲಿ ಅಮೃತ ಬಿಂದು। ಅಬ್ಬ ಎತ್ತನೋಡಿದಡಲ್ಲಿ ಸುಧೆಯ ಸಿಂಧು ॥೩॥ ಅತ್ತ ನಾರಿಯರೆಲ್ಲ ಒಟ್ಟು ಸಿಂದು । ಅಮ್ಮಾ ಮತ್ತೆ ತುಂಬಲು ಪಾತ್ರ ಇಲ್ಲವೆಂದು ॥೪॥ ಸುತ್ತೆಲ್ಲಾ ಕುಣಿದಾಡೆ ಒಪ್ಪದಿಂದಾ। ಹಾಲು ಕಡಲಾತೆ ಎನ್ನುತ್ತ ಮಣಿದರಂದು ॥೫॥

ವಾರ್ಧಿಕ ಅರ್ಥ

ಮುರಹರನಪಾರ ಮಹಿಮೆಯ ಕಂಡು ವಿದುರ ತಾ । ಚರಣದೊಳು ಬಿದ್ದು ಜಯ ಜಯವೆನುತ ಸ್ತುತಿಗೈಯೆ । ಭರದೊಳಪ್ಪುತಲವನ ಶರಣರೊಳು ಶ್ರೇಷ್ಠ ನೀನೆಂಬಾಗ ಬಂದಳಾ ಪಾಂಡು ನೃಪನರಸಿ॥೧॥

ಕಾಂಬೋಧಿ ಝುಂಪೆತಾಳ

ಅತ್ತೆನೀ ಬಾರೆನುತ ಹತ್ತಿರದಿ ಕುಳ್ಳಿರಿಸಿ। ಮತ್ತವಳಿಗೊಂದಿಸುತ ಕೃಷ್ಣ ತಾನೆಂದ ॥
ಚಿತ್ತದಲಿ ನೊಂದಿರುವೆ ಮಕ್ಕಳನ್ನಗಲಿರುವೆ ।ಸ್ವಸ್ಥ ಚಿತ್ತವೆ ಪೇಳ್ಪುದೆಂದ॥೧॥
ಕಾವಕೊಲ್ಲುವ ದೇವ ಅಳಿಯ ನೀನಿರಲೆನಗೆ। ಯಾವುದಕೆ ಕಡಿಮೆ ಪೇಳಯ್ಯ॥

ದೇವಕಿಯು ವಸುದೇವ ಮೊದಲಾದ ನಿನ್ನವರು ಕ್ಷೇಮದಿಂದಿಹರೆ ಪೇಳಯ್ಯ॥೨॥
ಜೋಕೆಯಿಂದಿಹರೆ ಕಾನನಕ್ಕೈದ ಎನ್ನ ಚಿಗುರುಗಳು ಯಾವ ಬಗೆಯೊಳಗಿಹರು
ಹೇಳು ॥ ಸಾಕು ಚಿಂತೆಯನು ಬಿಡು ।ಆಂ ಕಾಯ್ತಿ ನಿನ್ನವರ ಆ ಕುರಿತೆ ಇಲ್ಲಿ
ಬಂದಿಹೆನು॥೩॥

ನವರೋಜು - ಏಕತಾಳ

ಅಕ್ಕು ಬಿಲs ಹೆದರಡದೇ। ತಕ್ಕುದನೇ ಮಾಡ್ತಿಬಿಡೆ ॥ ಸೊಕ್ಕಿದವರ ಗರ್ವವ
ಮುರಿದಿಕ್ಕುತ। ದಕ್ಕಲು ಬಿಡೆನೀ ಭೂಮಿಯನವರಿಗೆ ॥೧॥

ಮೊದಲ್ನಂತೇ ಇರ್ತಹೇಳಿ। ಧರ್ಮಜನೆನ್ನ ಅಟ್ಟಿಹನಿಲ್ಲಿ। ಧರ್ಮಕೆ ಜಯವೆಂಬದ
ನಂಬಿಕೋ ನೀ। ಕರ್ಮ ಫಲವ ಅನುಭವಿಸಲು ಬೇಕಲೇ ॥೨॥

ಯಾಕಳತೆ ಸುಮ್ಮಂಗಿರು। ಆಂ ಕೊಲ್ಲತಿ ಕೌರವರ । ಜೋಕೆಯೊಳ್ ನಿನ್ನವರನು
ಸಂರಕ್ಷಿಸಿ। ಬೇಕಾದುದ ನಾ ನೀವೆನು ನಂಬಿಕೊ ॥೩॥

ಭಾಮಿನಿ

ಅಭಯವನು ಕರುಣಿಸಲು ಶ್ರೀಹರಿ । ಶುಭ ನಿರೀಕ್ಷೆಯ ತಳೆದು ಕುಂತಿಯು
ವಿಭವವನು ಹಂಬಲಿಸಿ ತೆರಳಿದಳಾಗ ಗೃಹದೆಡೆಗೆ ॥

ಶುಭಕರನ ಮಹಿಮೆಯನು ಪೊಗಳಲು । ಅಜಸುರಾದ್ಯರಿಗಳವೆ ಪಾಂಡವರ।
ಶುಭವ ಹಾರೈಸುವಗೆ ಜಯ ಜಯವೆನಲು ಮಾನಸರು ॥೧॥

ರಾಗಧವಳಾರ - ಏಕತಾಳ

ಮಂಗಲಂ ಜಯ ಮಂಗಲೇ
ಮಂಗಲ ಹತ್ತವತಾರದ ಕೃತ್ಯಕೆ। ಮಂಗಲ ಕಲ್ಕಿಯ ಚಿತ್ರ ವೈಚಿತ್ರಕೆ।
ಮಂಗಲ ಶ್ರೀಧರ ಗುರುವರನೇ। ಮಂಗಲಂ ಜಯ ಮಂಗಲಂ॥೧॥
ಮಂಗಲ ಮನುಜನ ರೂಪ ಸಾದೃಶ್ಯಕೆ। ಮಂಗಲ ಕರ್ಮದ ನೆಲೆಬೆಲೆಯರೀತಗೆ।
ಮಂಗಲ ಅಖಿಲಾಂಡಕೋಟಿ ಬ್ರಹ್ಮಾಂಡಕೆ । ತನ್ನುದರದಿ ನೆಲೆಕೊಟ್ಟವಗೆ ॥
ಮಂಗಲಂ ಜಯ ಮಂಗಲಂ॥೩॥

------* ॥ಶ್ರೀ ಕೃಷ್ಣಾರ್ಪಣಮಸ್ತು॥ *---*---*

ಹವಿಗನ್ನಡ ಪ್ರಸಂಗಕರ್ತರ ವಿಳಾಸ

ಹವಿಗನ್ನಡದಲ್ಲಿ ಇಲ್ಲೀವರೆಗೆ 12 ಜನ್ರಿಂದ 19 ಪ್ರಸಂಗ ರಚ್ನೆ ಆಜು.

ಈ ಸಂಕಲನದಲ್ಲಿದ್ದ 9 ಪ್ರಸಂಗದ ಕವಿಯಕ್ಕೊ 9 ಜನ. ಅವ್ರ ವಿಳಾಸ ಅಲ್ಲಲ್ಲೇ ಕಾಣ್ಸಿದ್ದೊ. ಬಾಕಿ ಮೂರು ಕವಿಯಕ್ಕ ವಿಳಾಸ

1. ಡಾ|| ಅಂಬೆಮೂಲೆ ಗೋವಿಂದ ಭಟ್ಟ ಮುಳ್ಳೇರಿಯಾ, ಕಾಸರಗೋಡು–671543 ಫೋನ್: 04994–260236
2. ಡಾ|| ವಿಶ್ವನಾಥ ಹೆಗಡೆ ಹಡಿನಬಾಳ, ಹೊನ್ನಾವರ ಉತ್ತರ ಕನ್ನಡ ಫೋನ್ : 08387–279582
3. ಸೂರ್ಯನಾರಾಯಣ ಭಟ್ಟ ಪೊಟ್ಟಪ್ಪಲ ಕಾಸರಗೋಡು ಇವ್ರು ದಿವಂಗತರು

ಹವಿಗನ್ನಡ ಪ್ರಸಂಗಕರ್ತರು – ಪ್ರಸಂಗಗಳು

1. ಡಾ|| ಅಂಬೇಮೂಲೆ ಗೋವಿಂದಭಟ್ಟ : ಕಾರ್ತವೀರ್ಯಾರ್ಜುನ, ದ್ರೌಪದೀ ಪ್ರತಾಪ, ಪರಶುರಾಮ ಮಹಾತ್ಮೆ ಸತ್ಯಾನ್ವೇಷಣೆ, ಸುಭದ್ರಾ ಕಲ್ಯಾಣ
2. ಡಾ|| ವಿಶ್ವನಾಥ ಹೆಗಡೆ ಹಡಿನಬಾಳ : ಗೋವಿಂದರಾಜೀ ಪಂಚ್ಯಾಯ್ತಿ
3. ವಿಶ್ವವಿನೋದ ಬನಾರಿ :ಕೃಷ್ಣಾರ್ಜುನರ ಕಾಳಗ, ಕೃಷ್ಣಸಂಧಾನ, ದಕ್ಷಾಧ್ವರ, ಮಾಗದ ವಧೆ
4. ದಿವಂಗತ ಸೂರ್ಯನಾರಾಯಣ ಭಟ್ಟ : ತಾಟಕಾಮೋಕ್ಷ ಅಥವಾ ಯಾಗ ಸಂರಕ್ಷಣೆ ಮತ್ತು ಸೀತಾಕಲ್ಯಾಣ

ಉಳಿದ 8 ಜನ ಕವಿಯಕ್ಕ 8 ಪ್ರಸಂಗ, ಜೊತೆಗೆ ವಿಶ್ವವಿನೋದ ಬನಾರಿಯವ್ರ ನಾಲ್ಕು ಪ್ರಸಂಗ್ದಲ್ಲಿ ಮಾಗದ ವಧೆನೂ ಸೇರಿ ಒಟ್ಟು 9 ಪ್ರಸಂಗ ಈ ಸಂಕಲನದಲ್ಲಿದ್ದು.

ಟಿಪ್ಪಣಿ: 1) ತಾಳ್ತಜೆ ಕೃಷ್ಣಭಟ್ರ 'ಮಯೂರವರ್ಮ ವಿಲಾಸ' (ಮು. 1997) ಪ್ರಸಂಗ್ದಲ್ಲಿ ಕೆಲವು ಪದ್ಯ ಹವಿಗನ್ನಡ್ದಲ್ಲಿದ್ದು.

2) ಜಿ.ಟಿ. ಮುಡೂರ ಇವ್ರ ರಚ್ನೆ 'ಕುರುರಾಯನ ಓಲಗ' (ಅಮುದ್ರಿತ) ಪ್ರಸಂಗ್ದಲ್ಲಿ ಹವಿಗನ್ನಡಾನೂ ಸೇರಿ 4 ಭಾಷೆಲಿ ಪದ್ಯ ಇದ್ದಡ.

3) ಕೀಲಾರು ತಿಮ್ಮಪ್ಪಯ್ನೋರ 'ಅಂಬಾಡಿ ಕಾಳಗ' ಅಪೂರ್ಣ ಪ್ರಸಂಗ್ದಲ್ಲಿ ಹವಿಗನ್ನಡಾನೂ ಸೇರಿ 4 ಭಾಷೆಲಿ ಪದ್ಯ ಇದ್ದಡ.

ಹವಿಗನ್ನಡ ಪ್ರಸಂಗಗಳ ಧ್ವನಿಸುರುಳಿ ಕರ್ತರು

1) ಬಳ್ಳಿಮೂಲೆ ಗೋವಿಂದ ಭಟ್ಟ, ಕೋಟೂರು, ವಾಯಾ ಮುಳಿಯಾರ್, ಕಾಸರಗೋಡು–671 542 ಮೊಬೈಲ್: 94469 21756

2) ಚೇಕೋಡು ಕೃಷ್ಣಭಟ್ಟ ''ಸೌಭಾಗ್ಯ ನಿಲಯ'' ವಿವೇಕಾನಂದ ಕಾಲೇಜು ರಸ್ತೆ ನೆಹರೂ ನಗರ, ಪುತ್ತೂರು. ದ.ಕ.–571 202. ಮೊಬೈಲ್: 94485 46007

ಅನುಬಂಧ

ಹವ್ಯಕ ಅಧ್ಯಯನ ಕೇಂದ್ರದ ಪ್ರಕಟಣೆಗಳು

	ಶೀರ್ಷಿಕೆ	ಲೇಖಕ	ವರ್ಷ / ಪುಟ
1.	*ವರ್ತಮಾನ ಹವ್ಯಕ ಲೇಖಕರ ದೂರವಾಣಿ ಕೈಪಿಡಿ	ಸಂಪಾದಕ : ನಾರಾಯಣ ಶಾನಭಾಗ	2004 / 96
2.	*ಕೀರ್ತಿಶೇಷ ಹವ್ಯಕ ಗ್ರಂಥಕಾರ ಕೃತಿಸೂಚಿ (ಸಂಶೋಧನ ಕೃತಿ)	ನಾರಾಯಣ ಶಾನಭಾಗ	2005 / 96
3.	ನುಡಿ ಸಂಸ್ಕೃತಿ ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಪಡೆನುಡಿಗಳ ಕೋಶ	ಡಾ।। ಶ್ರೀ ಕೃಷ್ಣ ಭಟ್ಟ ಅರ್ತಿಕಜೆ ಮತ್ತು ಡಾ।। ಹರಿಕೃಷ್ಣ ಭರಣ್ಯ	2005 / 120
4.	ಈ ನೆಲದ ಕಂಪು	ಡಾ।। ಹರಿಕೃಷ್ಣ ಭರಣ್ಯ	2006 / 240
5.	ಹವಿಗನ್ನಡ ಚಿಂತನ	ನಾರಾಯಣ ಶಾನಭಾಗ	2006 / 120
6.	*ನೂತನ ಮಂತ್ರದೃಷ್ಟಾರ ಬ್ರಹ್ಮರ್ಷಿ ದೈವರಾತರು	ಡಾ।। ಜಿ.ಎನ್. ಭಟ್ಟ ನಡಗೋಡು ಶಿರಸಿ	2006 / 48
7.	ಕನ್ನಡ ಪ್ರಾಧ್ಯಾಪಕ ಪ್ರೊ। ಮರಿಯಪ್ಪ ಭಟ್ಟರು	ಎ. ನರಸಿಂಹ ಭಟ್ಟ ಕಾಸರಗೋಡು	2006 / 80
8.	ರಸಾಯನ – ಹವಿಗನ್ನಡ ಹರಟೆ – ಪ್ರಬಂಧಗಳು	ಡಾ।। ಹರಿಕೃಷ್ಣ ಭರಣ್ಯ	2006 / 80

9. ಹವ್ಯಕ ಮಹಿಳಾ ಸಾಹಿತ್ಯ ದರ್ಶಿನಿ — ನಾರಾಯಣ ಶಾನಭಾಗ — 2007 / 80

10. ಹವಿಗನ್ನಡದ ನವ ಪ್ರಸಂಗಗಳು — ಸಂಪಾದಕ ನಾರಾಯಣ ಶಾನಭಾಗ — 2007/120

* ಈ ಪ್ರಕಟಣೆಗಳ ಪ್ರತಿ ಮುಗಿದಿದೆ

ಬರಲಿರುವ ಪ್ರಕಟಣೆಗಳು :

1. ಹವ್ಯಕ ಯಕ್ಷಗಾನ ಕವಿ ಕಾವ್ಯ ಸೂಚಿ (ಸಂಶೋಧನ ಕೃತಿ) — ನಾರಾಯಣ ಶಾನಭಾಗ
2. ಜನಪ್ರತಿನಿಧಿ ಹವ್ಯಕರು — ಟಿ.ಎಂ. ಸುಬ್ಬರಾಯ ಶಿರಸಿ
3. ಪತ್ರಿಕಾರಂಗದಲ್ಲಿ ಹವ್ಯಕರು — ಮೋಹನ ಗ ಹೆಗಡೆ ಸಾಗರ
4. ಸ್ವಾತಂತ್ರ್ಯ ಸಂಗ್ರಾಮದಲ್ಲಿಹವ್ಯಕರು — ಎಲ್.ಪಿ. ಹೆಗಡೆ, ಶ್ರೀಪಾದ ಹೆಗಡೆ, ಗೀತಾ ಹೆಗಡೆ ಸಿದ್ದಾಪುರ
5. ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಜನಪದ ಸಂಸ್ಕೃತಿ (ಪಿ.ಎಚ್.ಡಿ. ಪ್ರಬಂಧ) — ಡಾ॥ ಜಿ.ಎಸ್. ಹೆಗಡೆ ಹಡಿನಬಾಳ

+++

ಹವ್ಯಕ ಪ್ರಜ್ಞಾ ವಿಸ್ತಾರಕ್ಕಾಗಿ ಹವ್ಯಕ ಅಧ್ಯಯನ ಕೇಂದ್ರದ ಪ್ರಕಟಣೆಗಳನ್ನು ಕೊಂಡು ಓದಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಪುಸ್ತಕಗಳು ರಿಯಾಯಿತಿ ದರದಲ್ಲಿ ಲಭ್ಯ.

ಕರ್ನಾಟಕ ವಿದ್ಯುನ್ನಿಗಮದ ಕಾರ್ಯಪಾಲಕ ಅಭಿಯಂತರ ಹುದ್ದೆಯಿಂದ ಜನವರಿ 2001ರಲ್ಲಿ ನಿವೃತ್ತರಾದ ನಾರಾಯಣ ಶಾನಭಾಗರು ಸದ್ಯ ಸಾಮಾಜಿಕ ಕಾರ್ಯವನ್ನು ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡಿದ್ದಾರೆ. ಶ್ರೀ ಅಖಿಲ ಹವ್ಯಕ ಮಹಾಸಭೆಯ ಹವ್ಯಕ ಅಧ್ಯಯನ ಕೇಂದ್ರದ ಸ್ಥಾಪಕ ಪ್ರಧಾನ ನಿರ್ದೇಶಕರಾಗಿದ್ದಾರೆ.

ಮಾತೃ ಸಮಾಜದ ಅರಿವು ಮೂಡಿಸುವ ಪ್ರಕ್ರಿಯೆ ಗುರುತರವಾದುದು. ಹವ್ಯಕ ಅಧ್ಯಯನ ಕೇಂದ್ರ ಇಂತಹ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವುದು ಪ್ರಶಂಸನೀಯ. ಈ ಕೇಂದ್ರವನ್ನು ಸರಿಯಾಗಿ ಪೋಷಿಸುವ ಜವಾಬ್ದಾರಿ ಸಮಗ್ರ ಹವ್ಯಕ ಸಮಾಜದ ಮೇಲಿದೆ. ಅಧ್ಯಯನ ಕೇಂದ್ರ ನಿಜಕ್ಕೂ ಒಂದು ಶಕ್ತಿಯ ಕೇಂದ್ರವಾಗಲಿ.

— ಡಾ|| ಎ.ಕೆ. ಶಾಸ್ತ್ರಿ, ರಾಷ್ಟ್ರೀಯ ಖ್ಯಾತಿಯ ಇತಿಹಾಸತಜ್ಞ

ಮಹಾಸಭೆಯ ಅರವತ್ತರ ಸಂಭ್ರಮದಲ್ಲಿ ಸ್ಥಾಪನೆಯಾದ ಹವ್ಯಕ ಅಧ್ಯಯನ ಕೇಂದ್ರ ಸಮುದಾಯದ ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ಶಿಸ್ತು ರೂಢಿಸಿಕೊಂಡಿದೆ. ಅದು ಕ್ರಮೇಣ ಒಂದು ಶಕ್ತಿಯಾಗಿ ಬೆಳೆಯುತ್ತಿರುವುದು ಸಂತೋಷದ ಸಂಗತಿ. ಅಧ್ಯಯನ ಕೇಂದ್ರ ಕೆಲವು ಸುಂದರ ಕನಸುಗಳನ್ನು ನನಸಾಗಿಸುವತ್ತ ದಿಟ್ಟ ಹೆಜ್ಜೆಗಳನ್ನಿಡುತ್ತಿದೆ. ಸಮಾಜದ ಸಹೃದಯರು ಅದನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತಾಗಲಿ.

— ಶ್ರೀ ಎಂ.ಎನ್. ಭಟ್ಟ, ಅಧ್ಯಕ್ಷರು, ಶ್ರೀ ಅಖಿಲ ಹವ್ಯಕ ಮಹಾಸಭಾ

ಹವ್ಯಕ ಮಹಾಸಭೆಲಿ ಹವಿಗನ್ನಡ್ದ ಎಲ್ಲಾ ಪ್ರಾದೇಶಿಕ ಸ್ವರೂಪಗಳ ಪ್ರಾತಿನಿಧ್ಯ ಇದ್ದು, ನುಡಿಯ ಮಹಾಸೂತ್ರದ ಮೂಲಕ ಎಲ್ಲಾ ಹವ್ಯಕರನ್ನೂ ಒಗ್ಗೂಡಿಸಲ್ಲೆ ಸಾಧ್ಯ ಇದ್ದು. ಮಠ ಬಿಟ್ರೆ ನಮ್ಗೆ ನಮ್ಮದನ್ನ ಹೇಳ್ಕಂಬ್ಲೆ ಮಹಾಮನೆಯಾಗಿ ಇಪ್ಪದು ಅಂದ್ರೆ ಮಹಾಸಭೆನೇಯ. ಸಮಸ್ತ ಹವ್ಯಕರ ಏಳ್ಗೆ–ಹಿತ ಬಯಸೋ ಮಹಾಸಭೆ ತಾಯ್ನುಡಿ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸವ್ಕು.

— ಡಾ|| ಶಾಲಿನಿ ರಘುನಾಥ ಭಟ್ಟ